# ಆಹಾ ಸುದ್ದಿ!

★ ಸಸಿತೋಟ



ಬೆಳಿಗ್ಗೆ ಕಚೇರಿಗೆ ಹೊರಡುವಾಗ ಬೈ ಹೇಳಲೂ ಚೀನಾದಲ್ಲಿ ಕೆಲವರಿಗೆ ಸೆಕ್ಸ್ ಡಾಲ್ ಬೇಕಂತೆ. ಚೀನಾದವರ ತಲಾ ಆದಾಯ ಏರಿದಂತೆಲ್ಲ, ತಲೆಯೊಳಗಿನ ಸೆಕ್ಸ್ ಕುರಿತ ಆಲೋಚನೆಗಳ ಮಟ್ಟವೂ ಏರಿದಂತಿದೆ. ಬೀದಿ ಬೀದಿಗಳಲ್ಲಿ ಅಲ್ಲಿ ಸೆಕ್ಸ್ ಆಟಿಕೆಗಳ ಮಳಿಗೆಗಳು ತಲೆ ಎತ್ತಿದ್ದು, ಸ್ನೇಹಿತೆಯ ದುಬಾರಿ ಬೇಡಿಕೆಗಳನ್ನು ಪೂರೈಸಲಾಗದೇ ಹೆಣಗಾಡುವವರು ಇಂತಹ ಬೊಂಬೆಗಳ ಮೇಲೆ ಹಣ ಸುರಿಯುತ್ತಿರಬಹುದು.



ಊಸರವಳ್ಳಿ ಬಣ್ಣ ಬದಲಿಸಿ ವೈರಿಗಳಿಂದ ಪಾರಾಗುವುದರಲ್ಲಿ ತಜ್ಞ. ಆದರೆ ಈ ಎರಡು ಸಸ್ತನಿಗಳು ವೇಷಾಂತರ ಮಾಡುವುದರಲ್ಲಿ ಅದಕ್ಕಿಂತ ನಿಸ್ಸೀಮರು. ಬಾಡಿ ಆರ್ಟ್ ತಜ್ಞೆ ಜೋಹಾನಸ್ ಸ್ಟಾಟರ್ ಇಬ್ಬರು ರೂಪದರ್ಶಿಗಳನ್ನು ರೂಪಾಂತರಿಸಿದ ಬಗೆಯಿದು. ಬಣ್ಣ ಬಳಿಯದಿದ್ದರೂ ವೇಷಾಂತರ ಮಾಡುವ ಕಲೆ ಮಾನವನೆಂಬ ಎರಡು ಕಾಲುಗಳ ಪ್ರಾಣಿಗೆ ಸಿದ್ಧಿಸಿದ್ದು, ಇಷ್ಟೊಂದು ಕಷ್ಟಪಡಬೇಕಾಗಿರಲಿಲ್ಲ.

ಬ್ರಿಟಿಷ್ ಹಾರ್ಟ್ ಫೌಂಡೇಶನ್‌ಗೆ ಹಣ ಸಂಗ್ರಹಿಸಲು 10 ಕಿ.ಮೀ. ಓಟ ಏರ್ಪಡಿಸಲಾಗಿತ್ತಂತೆ. ಆದರೆ ಕೆಲವರು 13- 14 ಕಿ.ಮೀ. ದೂರ ಓಡಿ ಕೊನೆಯಲ್ಲಿ ಓಡಲಾಗದೆ ಕಣ್ಣೀರಿಟ್ಟರಂತೆ. ಇನ್ನು ಕೆಲವರು ಸಿಕ್ಕ ವಾಹನಗಳನ್ನು ಏರಿ ನಿಟ್ಟುಸಿರು ಬಿಟ್ಟರಂತೆ. ಮಾರ್ಗದರ್ಶಕ ಮಾರ್ಗ ಮಧ್ಯೆ ನೈಸರ್ಗಿಕ ಕರೆಗೆ ಓಗೊಟ್ಟು ಕಣ್ಮರೆಯಾಗಿದ್ದೇ ಈ ಎಲ್ಲಾ ಎಡವಟ್ಟುಗಳಿಗೆ ಕಾರಣ ಎಂದು ಸಂಘಟಕರು ಮೊದಲು ಗುರಿ ಮುಟ್ಟಿದವನ ಬಹುಮಾನವನ್ನೂ ಮುಟ್ಟುಗೋಲು ಹಾಕಿಕೊಂಡರಂತೆ. ಬ್ರಿಟನ್ನಿನಲ್ಲೇ ಹೀಗಾದರೆ, ಇನ್ನು ಇಂಡಿಯಾದಲ್ಲಿ..!



ಶಾಂಘೈನಲ್ಲಿ ಹಳೆಯ ಕಟ್ಟಡಗಳ ಸಾಂಪ್ರದಾಯಕ ರಚನೆಯನ್ನು ಉಳಿಸಲು ಒತ್ತಾಯಿಸಿ ಕಲಾವಿದರು ಕೆಲವರಿಗೆ ಪ್ರಾಚೀನ ಕಟ್ಟಡದ ರಚನೆಯಂತೆ ಬಣ್ಣ ಬಳಿದು ನಿಲ್ಲಿಸುತ್ತಿದ್ದಾರಂತೆ. ಆದರೆ ಈಗ ಮೂಲ ಉದ್ದೇಶವೇ ಮರೆತು ಹೋಗಿ ಹೊಸ ಕಲೆಯೇ ಹುಟ್ಟಿಕೊಂಡಿದೆಯಂತೆ. ಏನೋ ಮಾಡಲು ಹೋಗಿ...

ಚೀನಾದ ಪ್ರವಾಸಿಗರು ವಿದೇಶಗಳಲ್ಲಿ ಕೆಟ್ಟದಾಗಿ ನಡೆದುಕೊಂಡು ದೇಶದ ಇಮೇಜ್ ಹಾಳು ಮಾಡುತ್ತಿದ್ದಾರಂತೆ. ಅದಕ್ಕೆಂದೇ ಅಲ್ಲಿಯ ಸರ್ಕಾರ ಸ್ಥಳೀಯವಾಗಿ ಹೇಗೇಗೊ ವರ್ತಿಸುವವರ ಮೇಲೆ ಕಣ್ಣಿಟ್ಟಿದೆಯಂತೆ. ಮೂಲ ಸೌಕರ್ಯಗಳನ್ನು ಹಾಳು ಮಾಡುವುದು, ಸರ್ಕಾರಿ ಸಾರಿಗೆಯಲ್ಲಿ ಕೆಟ್ಟದಾಗಿ ನಡೆದುಕೊಳ್ಳುವುದು, ಐತಿಹಾಸಿಕ ಸ್ಮಾರಕಗಳ ಮೇಲೆ ಗೀಚುವುದು, ದೇವಸ್ಥಾನಗಳ ಬಳಿ ಬಟ್ಟೆ ತೊಳೆದು ಒಣಗಿಸುವುದು... ಆದರೆ ಇವೆಲ್ಲ ಭಾರತೀಯ ಪ್ರವಾಸಿಗರ ಮೂಲಭೂತ ಹಕ್ಕು ಎಂಬಂತಾಗಿಬಿಟ್ಟಿವೆಯಲ್ಲ, ಚೀನೀಯರು ಕೂಡಾ ಅದಕ್ಕಾಗಿ ಒತ್ತಾಯಿಸುವುದು ಒಳಿತು.



ಚೀನಾದಲ್ಲಿ ಇತ್ತೀಚೆಗೆ ಕ್ಷೌರಿಕರಿಗಾಗಿ ಪರೀಕ್ಷೆ ನಡೆಯಿತು. ನೂರಾರು ಮಂದಿ ಪ್ರಾಯೋಗಿಕ ಪರೀಕ್ಷೆಗೆ ಹಾಜರಾದರು. ಪ್ರಯೋಗಕ್ಕೆ ಒಡ್ಡಿಕೊಂಡಿದ್ದು ಮುದ್ದು ನಾಯಿಮರಿಗಳು. ಸಾಕು ಪ್ರಾಣಿಗಳ ಭಾವಿ ಕ್ಷೌರಿಕರ ಕತ್ತರಿಚಳಕದ ಬಗ್ಗೆ ಅವುಗಳ ಪ್ರತಿಕ್ರಿಯೆಯನ್ನು ಯಾರೂ ಪರಿಶೀಲನೆಗೆ ತೆಗೆದುಕೊಂಡಂತಿಲ್ಲ.